ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮುಳಬಾಗಿಲು ಪಟ್ಟಣದ ಪಕ್ಕದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬೈಪಾಸ್ ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಆ) ಬೈಪಾಸನ್ನು ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚವೆಷ್ಟು?

ಇ) ಪಟ್ಟಣದಲ್ಲಿ ದಿನೇ ದಿನೇ ಅಪಘಾತಗಳು ಹೆಚ್ಚಾಗುತ್ತಿರುವ ಪ್ರಯುಕ್ತ ಸದರಿ ಬೈಪಾಸನ್ನು ಕೂಡಲೇ ನಿರ್ಮಾಣ ಮಾಡಲು ಕಾರ್ಯಕ್ರಮ ಕೈಗೊಳ್ಳುವರೆ?

ಈ) ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬೈಪಾಸ್‌ಗೆ ಬೇಕಾಗುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಮುಳಬಾಗಿಲು ಬೈಪಾಸ್ ರಸ್ತೆ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ೨೯-೧೦-೯೧ರಲ್ಲಿ ಅಂದಾಜುಪಟ್ಟಿ ಮಂಜೂರಾಗಿದೆ. ಕೆಲಸವನ್ನು ಕೈಗೊಳ್ಳಲು ಸೂತ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬೈಪಾಸ್ ರಸ್ತೆ ಕೆಲಸಕ್ಕೆ ೧೮೩.೮೪ ಲಕ್ಷ ರೂ. ಗಳಲ್ಲಿ ಅಂದಾಜು ಪಟ್ಟಿ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ.

ಇ) ಈ ಕೆಲಸಕ್ಕೆ ಟೆಂಡರ್ ಕರೆದಿದ್ದು ಕೆಲಸವನ್ನು ಶೀಘ್ರದಲ್ಲೇ ಟೆಂಡರ್ ಮೂಲಕ ಕೈಗೆತ್ತಿ ಕೊಳ್ಳಲಾಗುವುದು.

ಈ) ಈ ಕೆಲಸಕ್ಕೆ ಟೆಂಡರ್‌ಗಳು ಬಂದಿದ್ದು ಪರಿಶೀಲನೆಯಲ್ಲಿದ್ದು ಶೀಘ್ರದಲ್ಲೇ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಜಿಲ್ಲಾಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ವರ್ಗವಾಗಿರುವ ರಸ್ತೆಗಳು

೧೩೬೪ (೧೨೬೯) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ಎಷ್ಟು ಕಿ. ಮೀ. ರಸ್ತೆ ವರ್ಗಾಯಿಸಬೇಕೆಂದಿರುವರು?

ಆ) ಲೋಕೋಪಯೋಗಿ ಇಲಾಖೆಗೆ ಸೇರಿದ ನಂತರ ಸರ್ಕಾರದವರು ಸದರಿ ರಸ್ತೆಗಳಿಗೆ ಕಿ. ಮೀ. ಒಂದಕ್ಕೆ ಎಷ್ಟು ಹಣ ಖರ್ಚು ಮಾಡಿ ಉತ್ತಮಪಡಿಸಲು ನಿರ್ಧರಿಸಿರುವರು?

ಇ) ಕೆಲವು ಮುಖ್ಯವಾದ ರಸ್ತೆಗಳಿಗೆ ಡಾಂಬರು ಹಾಕಲು ಪ್ರಯತ್ನಿಸುವರೇ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ.ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು

ಸರ್ಕಾರದ ಆದೇಶವನ್ನು ದಿನಾಂಕ ೮-೧೨-೧೯೯೨ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಹೀಗೆ ಮೇಲ್ದರ್ಜೆಗೇರಿಸಿದ ರಸ್ತೆಗಳಿಗೆ ಪ್ರತಿ ಕಿ. ಮೀ. ಉದ್ದಕ್ಕೆ ೧.೫ ಲಕ್ಷ ರೂಗಳ ಅಂದಾಜಿನಲ್ಲಿ ರಸ್ತೆಗಳನ್ನು ಉತ್ತಮಪಡಿಸಲು ಯೋಚಿಸಲಾಗಿದೆ.

ಇ) ಈ ರೀತಿ ಮೇಲ್ದರ್ಜೆಗೆ ಏರಿಸಿದ ಕೆಲವು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣವನ್ನು ಮಾಡಲಾಗುವುದು.

ಚಿಂತಾಮಣಿ ತಾಲ್ಲೂಕಿನಲ್ಲಿ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ

೧೯೬೫ (೧೫೫೫೩) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಂತಾಮಣಿ ತಾಲ್ಲೂಕು (ಕೋನಪ್ಪಲ್ಲಿ ಮಂಡಲ್) ಅಂಬಾಜಿದುರ್ಗ ಹೋಬಳಿ ಚೌಂಪ್ರ ಹಳ್ಳಿ ಆತ್ತಿಕೆರೆ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ ಪ್ರಾರಂಭವಾಗಿದೆಯೇ?

ಆ) ಹಾಗೇನಾದರೂ ಅಂದಾಜು ತಯಾರಿಸಿದ್ದರೆ ಅಂದಾಜು ಮೊಬಲಗು ಎಷ್ಟು? ತಯಾರಿಸಿದ ದಿನಾಂಕ ಮತ್ತು ಈ ಬಗ್ಗೆ ಎಷ್ಟು ಕೆಲಸ ಆಗಿದೆ?

ಇ) ಸದರಿ ಕೆಲಸದ ಬಗ್ಗೆ ಕೆಲವರು ಲೋಕಾಯುಕ್ತಕ್ಕೆ ದೂರು ನೀಡಿದ್ದು ಇದರ ಬಗ್ಗೆ ವಿಚಾರಣೆ ನಡೆದಿದೆಯೇ? ಮತ್ತು ಸದರಿ ಅಧಿಕಾರಿಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಈ) ಬಹಳ ದಿನಗಳಿಂದ ಈ ಕಾಮಗಾರಿ ಕೆಲಸ ನಿಂತು ಹೋಗಿ, ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಹೌದು.

ಆ) ಅಂದಾಜು ಮೊತ್ತ ೯.೯೮ ಲಕ್ಷ ರೂ.ಗಳಾಗಿದ್ದು ದಿನಾಂಕ ೨೧-೨-೧೯೯೦ರಂದು ತಯಾರಿಸಲಾಗಿದೆ. ನೀರಿನ ಗರಿಷ್ಟ ಮಟ್ಟದವರೆಗೆ ಏರಿಯನ್ನು ನಿರ್ಮಿಸಲಾಗಿದೆ ಹಾಗೂ ಕೋಡಿಯನ್ನು ನಿರ್ಮಿಸಲಾಗಿದೆ.

ಇ) ಸದರಿ ಕೆಲಸದ ಬಗ್ಗೆ ಲೋಕಾಯುಕ್ತದ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಸಂಬಂಧಪಟ್ಟ ಕಡತಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಲೋಕಾಯುಕ್ತದೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಬಂದಿದೆ.

ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ವಸತಿ ಗೃಹವು ಹೀನಾಯ ಸ್ಥಿತಿಯಲ್ಲಿರುವ ಬಗ್ಗೆ

೧೯೬೬ (೧೫೫೪೪) ಶ್ರೀ ಅಂಜನಾ ಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಗೆ